Karnataka Civil Judge (Mains) 2019 (September notification cycle, CJR 13/2019)

Translation Paper · compulsory paper

Date: 09.11.2019 · Time: 10.00 AM to 1.00 PM · Max Marks: 100

1. Translate the following deposition to Kannada language: 15 Marks

Examination in Chief By the Assistant Public Prosecutor:

I know the accused No.1 to 3, who are my neighbours. About one year back, at about 8.30 a.m., I was standing in front of Hosur Grama Panchayath Office, with a spade in my hand, on the way to my agricultural land.

I saw the accused No.1 to 3 sitting on a platform near the panchayath office and there were making comments about my sister Kamala. I went near them and asked them about they making comments against my sister. The accused No.2 Dilipa hit me on my nose with his hand forcibly and I started bleeding. The accused No.1 Shankara snatched the spade from my hand and hit me with the handle of the spade on the left side of my neck. All the accused abused me in filthy language and posed threat to kill me and ran away from the spot, when other persons came to the spot to intervene and pacify the quarrel.

One Satisha, who was standing near the panchayath office, took me to the Hosur Police Station and I told the police about the incident and then lodge a complaint as per Ex.P1. I have signed the complaint as per Ex.P1(a).

Thereafter, I was taken to Government Hospital, Hosur and the doctor at the Hospital gave treatment to me. Thereafter, police came to the spot and drew the mahazar and seized the spade from the spot. The police have also seized the sample soil and blood stained soil. Now I can identify them, which are before this court and same are marked as MO1 to 3 respectively. I can identify the accused No.1 to 3, who are now before the court.

Cross Examination by Sri.AK, Advocate for Accused:

It is true that during the year 2018, I was defeated in the Grama Panchayath Election by the accused No.3. It is also true that myself and the accused No.1 to 3 belong to different political parties. It is also true that near Hosur Panchayath Office, there will be crowd at about 8.30 a.m. It is true that there is another lady by name Kamala in our village. It is true that the said Kamala resides near Hosur Panchayath Office. I thought that the accused persons were commenting on my sister Kamala. My sister was residing in our house at Gandhinagara, Hosur.

At the time of the incident, Satisha was inside the Panchayath Office. It is false to suggest that, due to political enmity, I have lodged a false complaint against the accused. It is false to suggest that none of the accused persons abused or hit me or threatened me. It is false to suggest that no mahazar was drawn and no seizure of MO1 to 3 was made by the police in my presence. It is false to suggest that MO1 does not belong to me. It is false to suggest that I have lodged a false complaint and deposing falsely against the accused, due to the election dispute and political enmity between us.

Re-examination: Nil.

(Typed to my dictation in the Open Court)

R.I.O & A.C.,
Sd/-
Judicial Magistrate First Class

2. Translate the following document to Kannada language 20 Marks

LEASE DEED

This lease deed executed on this 31st Day of August 2017, in between:

Mr.Lawrence D Souza,
Aged about 40 years,
S/o Joseph D Souza, residing at
Flat No.101, Land Links Apartment
Nanthur, Mangalore.

(Hereinafter called as I PARTY)

-AND-

Mr.Raghavendra Shetty
Aged about 30 years
S/o Vasu Shetty, residing at
Brundavana Nagara
Puttur, Dakshina Kannda.

(Hereinafter called as II PARTY)

WHEREAS the I party is the absolute owner and in possession of the Residential house, morefully described in the schedule here in below, hereinafter referred to as the schedule premises.

AND WHEREAS on the request of the II party for his accommodation, the I party has agreed to lease out the schedule premises to the II party from 01/09/2017 to 31/07/2018 (11 months) on the following conditions:

1. That the I party hereby leases out the schedule premises to the II party for his personal use and occupation and has put the II party in possession of the same.

2. The II party shall be liable to pay a monthly rent of Rs.10,000/- (Rupees Ten Thousand Only) to the I party on or before the end of each month.

3. The II party has paid an amount of Rs.1,00,000/- (Rupees One Lakh) to the I party as rent advance, which is refundable without interest, when the II party vacates the schedule premises.

4. The I party is entitled to deduct the amount that becomes due from the II party towards arrears of rent, damages, arrears of electricity and water charges, from the said rent advance, while refunding the same.

5. The II party shall keep the schedule premises in a good condition, without causing any damage to it.

6. The II party shall pay the electricity and water charges regularly.

7. The I party shall pay the municipal tax and monthly maintenance charges.

8. The II party shall not sub-let the schedule premises and shall not induct any 3rd party.

9. The II party shall vacate and handover the vacant possession of the schedule premises to the I party immediately on the date of expiry of the lease period.

SCHEDULE
DESCRIPTION OF THE PREMISE

Residential Apartment bearing Flat No.101 in the First Floor, of the building known as "LAND LINKS APARTMENT", situated at Nanthur, Mangalore, Dakshina Kannada District.

I PARTY	II PARTY

WITNESSES:

1.

2.

3. Translate the following Passage as extracted from a Judgment to Kannada language: 15 Marks

Issue No.4 and 5

These two issues are interlinked to each other. To avoid the repetition of my discussion, I have taken these two issues together for determination. These issues are relating to the quantum of share to be allotted to the plaintiff and the mesne profits claimed by the plaintiff. In view of my findings on issues No.1 to 3, the suit 'A' schedule properties are proved to be the ancestral and joint family properties of the plaintiff and the defendant and it is liable to be divided between them equally. In respect of the suit 'B' schedule property, no evidence has been let in before this court to prove its existence and it is their ancestral and joint family property. Therefore, the suit in respect of 'B' schedule property is liable to be dismissed, whereas, in respect of the suit 'A' schedule property, the suit has to be decreed by allotting half share to the plaintiff.

The plaintiff is also entitled for mesne profits, as major portion of suit 'A' schedule property has been in possession of the defendant and he is getting its income. However, plaintiff has failed to produce any evidence relating to the income of the suit 'A' schedule property, so as to determine the quantum of mesne profits. Therefore, the quantum of mesne profits has to be determined through a separate enquiry in final decree proceedings. Accordingly, I answer both these issues in the affirmative.

Issue No.6

In view of my findings on the above issues, the suit filed by the plaintiff deserves to be partly decreed. Considering the facts and circumstances of this case and the relationship between the parties, I feel that they are to be directed to bear their respective costs. Accordingly, I proceed to pass the following order:

4. Translate the following deposition to English language: 15 Marks

ಪಾಟೀ ಸವಾಲು ಶ್ರೀ ಬಿ.ಎಂ.ಬಿ.ವಕೀಲರಿಂದ – ಪ್ರತಿವಾದಿ 1 ಮತ್ತು 2 ರವರ ಪರ :–

ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. 1ನೇ ಪ್ರತಿವಾದಿಯ ಪರಿಚಯ ನನಗಿರುವುದಿಲ್ಲ. ನಿ.ಪಿ.1 ಕರಾರು ಪತ್ರವನ್ನು 1ನೇ ಪ್ರತಿವಾದಿ ಬರೆದುಕೊಟ್ಟಿರುವರೆಂದು ನಾನು ಹೇಳಿದ್ದು, ಆ ಪತ್ರವನ್ನು ಬರೆದುಕೊಡುವುದಕ್ಕೆ ಮೊದಲು ನಾನು ಅವರನ್ನು ಭೇಟಿಮಾಡಿರುವುದಿಲ್ಲ. ನಾನು ಲೇವಾದೇವಿ ವೃತ್ತಿ ಮಾಡುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂ.189/ಪಿ-12 ಆಗಿದ್ದು ಅದರ ವಿಸ್ತೀರ್ಣ 3-00 ಎಕರೆ. ದಾವಾ ಸ್ವತ್ತನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ದಾವಾ ಸ್ವತ್ತಿನ ಮೂಲ ಹಕ್ಕು ದಾಖಲೆಗಳನ್ನು ಕೂಡ ನಾನು ನೋಡಿರುವುದಿಲ್ಲ. ದಾವಾ ಸ್ವತ್ತನ್ನು 1ನೇ ಪ್ರತಿವಾದಿ ಖರೀದಿ ಮಾಡಿಕೊಂಡಿದ್ದೇನೆ ಎಂದು ಹೇಳಿರುವುದು ಬಿಟ್ಟರೆ ಆಕೆಗೆ ಆ ಸ್ವತ್ತು ಹೇಗೆ ಬಂತು ಎಂಬುದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. 1ನೇ ಪ್ರತಿವಾದಿ ದಾವಾ ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದಳು ಎನ್ನುವುದು ಕೂಡ ನನಗೆ ಗೊತ್ತಿಲ್ಲ.

1ನೇ ಪ್ರತಿವಾದಿಗೆ ಎಷ್ಟು ಜನ ಹೆಣ್ಣುಮಕ್ಕಳು ಮತ್ತು ಎಷ್ಟು ಜನ ಗಂಡು ಮಕ್ಕಳು ಎಂದು ನನಗೆ ಹೇಳಲು ಆಗುವುದಿಲ್ಲ. ಆಕೆಯ ಕುಟುಂಬದಲ್ಲಿ ಒಟ್ಟು ಎಷ್ಟು ಜನ ಸದಸ್ಯರಿದ್ದರೆಂಬುದರ ಬಗ್ಗೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ 1ನೇ ಪ್ರತಿವಾದಿಯ ಮಗಳೆಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಪ್ರತಿವಾದಿ 3 ಮತ್ತು 4ನೇ ಪ್ರತಿವಾದಿಯರು 1ನೇ ಪ್ರತಿವಾದಿಯ ಗಂಡುಮಕ್ಕಳೆಂದರೆ ಸರಿ. ಪ್ರತಿವಾದಿಗಳೆಲ್ಲರೂ ಅವಿಭಕ್ತ ಕುಟುಂಬದಲ್ಲಿ ವಾಸವಿದ್ದಾರೆಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ 2 ರಿಂದ 4 ರವರುಗಳಿಗೆ ಕೂಡ ಹಕ್ಕು ಇದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತು 1ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳ ಅವಿಭಕ್ತ ಕುಟುಂಬದ ಸ್ವತ್ತೆಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ದಾವಾ ಸ್ವತ್ತಿನ ಕ್ರಯದ ಕರಾರು ಅಂದರೆ ನಿ.ಪಿ.1 ನ್ನು ಬರೆದುಕೊಡಲು 1ನೇ ಪ್ರತಿವಾದಿಗೆ ಸಂಪೂರ್ಣ ಹಕ್ಕಿರುವುದಿಲ್ಲವೆಂದರೆ ಸಾಕ್ಷಿ ಆ ಬಗ್ಗೆ ಯಾವುದೇ ಉತ್ತರ ಕೊಡಲಿಲ್ಲ. ಆದರೆ 1ನೇ ಪ್ರತಿವಾದಿಯೇ ಆ ಕ್ರಯದ ಕರಾರನ್ನು ಬರೆದುಕೊಟ್ಟಿದ್ದಾರೆಂದು ಸಾಕ್ಷಿ ಸ್ವತಃ ಹೇಳುತ್ತಾರೆ.

1ನೇ ಪ್ರತಿವಾದಿ ನಿ.ಪಿ.1 ಕ್ರಯದ ಕರಾರನ್ನು ಬರೆದುಕೊಟ್ಟ ಸಂದರ್ಭದಲ್ಲಿ ರೂ.5 ಲಕ್ಷ ಹಣವನ್ನು ಮುಂಗಡವಾಗಿ ಪಡೆದುಕೊಂಡಿದ್ದಾಳೆ. ನಿ.ಪಿ.1ನ್ನು ಬರೆದ ಸಂದರ್ಭದಲ್ಲಿ ಬಾಗಲಕೋಟೆಯಲ್ಲಿ ವ್ಯವಸಾಯದ ಜಮೀನಿನ ಮಾರುಕಟ್ಟೆ ಬೆಲೆ ಎಷ್ಟಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನಿ.ಪಿ.1ನ್ನು ಬರೆದುಕೊಟ್ಟ 90 ದಿನಗಳ ಒಳಗಾಗಿ ದಾವಾ ಸ್ವತ್ತಿನ ಕ್ರಯಪತ್ರವನ್ನು ಬರೆದುಕೊಡುತ್ತೇನೆಂದು 1ನೇ ಪ್ರತಿವಾದಿ ನನಗೆ ಹೇಳಿದ್ದರು. ನಿ.ಪಿ.1 ಬರೆದುಕೊಟ್ಟ 2 ತಿಂಗಳ ನಂತರ ನಾನು 1ನೇ ಪ್ರತಿವಾದಿಯನ್ನು ಭೇಟಿಮಾಡಿ ದಾವಾ ಸ್ವತ್ತಿನ ಕ್ರಯಪತ್ರ ಬರೆದು ಕೊಡಬೇಕೆಂದು ಕೇಳಿದ್ದೇನೆ. ಆದರೆ ಇಂತಹದೇ ನಿಖರವಾದ ದಿನಾಂಕದಂದು ಕೇಳಲು ಹೋಗಿದ್ದೇನೆಂದು ಹೇಳಲು ನನಗೆ ಆಗುವುದಿಲ್ಲ. ಆಕೆಯನ್ನು ಕೇಳಲು ನಾನೊಬ್ಬನೇ ಹೋಗಿದ್ದೆ ನನ್ನ ಜೊತೆ ಬೇರೆ ಯಾರೂ ಬಂದಿರಲಿಲ್ಲ. ದಾವಾ ಸ್ವತ್ತಿನ ಕ್ರಯಪತ್ರವನ್ನು ಬರೆದುಕೊಡಿ ಎಂದು ನಾನು 1ನೇ ಪ್ರತಿವಾದಿಯನ್ನು ಕೇಳಿದ ಸಂದರ್ಭದಲ್ಲಿ ಆಕೆಯ ಗಂಡ ರಾಮಪ್ಪ ಸಹ ಇದ್ದರು. ನಿ.ಪಿ.1 ಬರೆದುಕೊಟ್ಟ 90 ದಿನದ ಒಳಗಾಗಿ ನಾನ್ಯಾವತ್ತೂ 1ನೇ ಪ್ರತಿವಾದಿಯನ್ನು ಭೇಟಿಮಾಡಿ ದಾವಾ ಸ್ವತ್ತಿನ ಕ್ರಯಪತ್ರ ಬರೆದುಕೊಡಿ ಎಂದು ಕೇಳಿರುವುದಿಲ್ಲ ಎನ್ನುವುದು ಸರಿಯಲ್ಲ.

5. Translate the following document to English language: 20 Marks

ಶುದ್ಧ ಕ್ರಯ ಪತ್ರ

ಸನ್ ಎರಡುಸಾವಿರದ ಹದಿನೈದನೇ ಇಸವಿ ಜುಲೈ ತಾರೀಖು ಇಪ್ಪತ್ತೇಳರಂದು

ಚನ್ನರಾಯಪಟ್ಟಣ ತಾಲೂಕು ಹಿರಿಸಾವೆ ಗ್ರಾಮದ ಮಲ್ಲಾರು ಬಳಿ ವಾಸ ಇರುವ ದಿವಂಗತ ಗುರುಸ್ವಾಮಿಯವರ ಮಗ ಸುಮಾರು 45 ವರ್ಷ ವಯಸ್ಸಿನ ನಾರಾಯಣಸ್ವಾಮಿ ಆದ ನಾನು

ಚನ್ನರಾಯಪಟ್ಟಣ ತಾಲ್ಲೂಕು ಉದಯಪುರ ಗ್ರಾಮದ ಗುರಪ್ಪನವರ ಮಠದ ಬಳಿ ವಾಸವಾಗಿರುವ ರಂಗೇಗೌಡರ ಧರ್ಮಪತ್ನಿ ಸುಮಾರು 42 ವರ್ಷ ವಯಸ್ಸಿನ ಶ್ರೀಮತಿ ಬಿ.ಪಾರ್ವತಮ್ಮನವರಿಗೆ ಬರೆದುಕೊಟ್ಟ ಖುಷ್ಕಿ ಜಮೀನಿನ ಶುದ್ಧ ಕ್ರಯಪತ್ರ ಏನೆಂದರೆ

ಈ ಕೆಳಗೆ ವಿವರಿಸಿದ ಷೆಡ್ಯೂಲ್ ಸ್ವತ್ತು ನಮ್ಮ ಬಾಬತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು ದಿನಾಂಕ 11.11.1976ರಂದು ನಮ್ಮ ಕುಟುಂಬದಲ್ಲಿ ಆದ ನೋಂದಾಯಿತ ವಿಭಾಗ ಪತ್ರದ ಮೂಲಕ ನನ್ನ ಹಿಸ್ಸೆಗೆ ಬಂದಿದ್ದು ಆ ಲಗಾಯಿತುನಿಂದಲೂ ಸರ್ಕಾರಕ್ಕೆ ಕಂದಾಯವನ್ನು ಕಟ್ಟಿಕೊಂಡು ನಾನೇ ಸ್ವಂತವಾಗಿ ಬೆಳೆಯನ್ನು ಬೆಳೆಸಿಕೊಂಡು ಅನುಭವಿಸುತ್ತಿರುವ ಸ್ವತ್ತಾಗಿರುತ್ತದೆ. ಈ ಸ್ವತ್ತಿಗೆ ನನ್ನ ಹೊರತು ಇತರ ಯಾರಿಗೂ ಕೂಡ ಯಾವುದೇ ರೀತಿಯ ಹಕ್ಕು ಯಾ ಹಿತಾಸಕ್ತಿ ಇರುವುದಿಲ್ಲ.

ನನಗೆ ಷೆಡ್ಯೂಲ್ ಆಸ್ತಿಯ ಅಗತ್ಯವಿಲ್ಲದಿರುವುದರಿಂದ ಮತ್ತು ನಾನು ಹೊಸದಾಗಿ ಮನೆಯನ್ನು ಕಟ್ಟಿಸುತ್ತಿರುವುದರ ಬಾಬತ್ತು ನನಗೆ ಹಣದ ಆವಶ್ಯಕತೆ ಇರುವುದರಿಂದಲೂ ನಾನು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಉದ್ಯುಕ್ತರಾಗಿದ್ದು ಮತ್ತು ನೀವು ಕೂಡ ಸದರಿ ಸ್ಥಿರಾಸ್ತಿಯನ್ನು ಕ್ರಯಕ್ಕೆ ಪಡೆಯುವರೇ ಅಪೇಕ್ಷಿಸಿದ್ದರಿಂದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿ ಮತ್ತು ಅದರಲ್ಲಿ ನನಗಿರುವ ಎಲ್ಲಾ ಹಕ್ಕು, ಸಂಬಂಧ, ಭಾದ್ಯತೆಗಳ ಸಮೇತ ಈಗಿನ ಮಾರುಕಟ್ಟೆ ಬೆಲೆ ರೂ.5,00,000/– (ಐದು ಲಕ್ಷ ರೂಪಾಯಿಗಳಿಗೆ) ನಿಮಗೆ ಶುದ್ಧ ಕ್ರಯ ಮಾಡಿ ಕ್ರಯದ ಮೊಬಲಗು ಪೂರ್ತಾ ಈ ಪತ್ರಕ್ಕೆ ರುಜು ಹಾಕಿರುವ ಸಾಕ್ಷಿಗಳ ಮೋಕ್ತಾ ನಗದಾಗಿ ತೆಗೆದುಕೊಂಡು ಸದರೀ ಸ್ವತ್ತನ್ನು ಈ ದಿನವೇ ನಿಮ್ಮ ಸುಪರ್ದಿಗೆ ಒಪ್ಪಿಸಿರುತ್ತೇನೆ.

ಇನ್ನು ಮುಂದೆ ಸದರಿ ಸ್ವತ್ತಿಗೆ ನೀವೇ ಸಂಪೂರ್ಣ ಹಕ್ಕುದಾರರಾಗಿ ಸ್ವತ್ತಿಗೆ ಕೊಡಬೇಕಾದ ಸರ್ಕಾರಿ ಕಂದಾಯವನ್ನು ಪಾವತಿಮಾಡಿಕೊಂಡು ಸದರೀ ಸ್ವತ್ತನ್ನು ನೀವು ನಿಮ್ಮ ಇಷ್ಟಾನುಸಾರ ಸುಖದಿಂದ ಅನುಭವಿಸಿಕೊಂಡು ಬರುವುದು. ನಾನು ಈ ಸ್ವತ್ತನ್ನು ನಿಮ್ಮ ವಿನಃ ಮತ್ತಾರಿಗೂ ಪರಬಾರೆ ಮಾಡಿರುವುದಿಲ್ಲ. ಮುಂದೆ ಇದರ ವಿಚಾರದೊಳಗೆ ಯಾವ ವಿಧವಾದ ತಂಟೆ ತಕರಾರು ಬಂದಲ್ಲಿ ನಾನೇ ನನ್ನ ಸ್ವಂತ ಖರ್ಚಿನಿಂದ ಪರಿಹರಿಸಿಕೊಡುತ್ತೇನೆ. ಈ ಕ್ರಯ ಪತ್ರದ ಆಧಾರದ ಮೇಲೆ ಖಾತೆ ಪಹಣಿ ನಿಮ್ಮ ಹೆಸರಿಗೆ ಬದಲಾಗಲು ನನ್ನ ಅಭ್ಯಂತರ ಇರುವುದಿಲ್ಲ. ಈ ಕ್ರಯದ ಜಮೀನಿಗೆ ಫಾರಂ ನಂಬರು 14 ಮತ್ತು 15 ಭರ್ತಿ ಮಾಡಿ ಸಂಬಂಧಪಟ್ಟವರಿಗೆ ಸಲ್ಲಿಸಿ ನಿಮಗೆ ಈ ಕ್ರಯಪತ್ರವನ್ನು ರಿಜಿಸ್ಟರು ಮಾಡಿಕೊಟ್ಟಿರುತ್ತೇನೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಮೂಲಪತ್ರಗಳು, ಕಂದಾಯ ರಶೀತಿ, ಪಹಣಿ ಸಹಾ ನಿಮ್ಮ ವಶಕ್ಕೆ ಕೊಟ್ಟು ನಾನು ನನ್ನ ಖುದ್ದು ರಾಜಿಯಿಂದ ಒಪ್ಪಿ ಬರೆಸಿಕೊಟ್ಟ ಶುದ್ಧ ಕ್ರಯಪತ್ರ.

ಷೆಡ್ಯೂಲ್

ಚನ್ನರಾಯಪಟ್ಟಣ ತಾಲ್ಲೂಕು ಉದಯಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.159/16 ಖುಷ್ಕಿ ಎರಡು ಎಕರೆಗೆ ಆಕಾರ ಮೂರು ರೂಪಾಯಿ ಐವತ್ತು ಪೈಸಾ ತೆರುವ ನಾರಾಯಣಸ್ವಾಮಿ ಆದ ನನ್ನ ಹೆಸರಿಗೆ ಎಂ.ಟಿ 8/90-91 ರ ಮೇರೆ ಖಾತೆ ಹಾಗೂ ಪಹಣಿ ಇರತಕ್ಕ ಪೂರ್ತಾ ಜಮೀನಿಗೆ ಚೆಕ್ಕುಬಂದಿ:–

ಪೂರ್ವಕ್ಕೆ	:	ಗೋಪಾಲಗೌಡರ ಜಮೀನು
ಪಶ್ಚಿಮಕ್ಕೆ	:	ಈರಪ್ಪನವರ ಜಮೀನು
ಉತ್ತರಕ್ಕೆ	:	ಸುಶೀಲರವರ ಜಮೀನು
ದಕ್ಷಿಣಕ್ಕೆ	:	ಕೃಷ್ಣಪ್ಪನವರ ಜಮೀನು

6. Translate the following passage as extracted from a judgment to English language: 15 Marks

ತೀರ್ಪು

ಮಂಗಳೂರು ನಗರ ಪೊಲೀಸು ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿಯ ವಿರುದ್ಧ ಆತ ಭಾರತೀಯ ದಂಡ ಸಂಹಿತೆಯ ಕಲಂ 504 ಮತ್ತು 324ರ ಅಡಿಯಲ್ಲಿ ಅಪರಾಧವೆಸಗಿದ್ದಾನೆ ಎಂದು ಆರೋಪಿಸಿ ಈ ನ್ಯಾಯಾಲಯದ ಮುಂದೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

(2) ಅಭಿಯೋಜನಾ ಪ್ರಕರಣದ ಸಾರಾಂಶ ಈ ಕೆಳಗಿನಂತಿದೆ.

ದಿನಾಂಕ 05.04.2012ರಂದು ಬೆಳಗ್ಗೆ ಸುಮಾರು 10.30 ಗಂಟೆಗೆ ಕುದ್ರೋಳಿ ದೇವಸ್ಥಾನದ ಬಳಿ ಆರೋಪಿಯು ಚಾ.ಸಾ.1 ಇವರೊಂದಿಗೆ ಜಗಳ ತೆಗೆದು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು ಒಂದು ದೊಣ್ಣೆಯಿಂದ ಆತನ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡಿರುತ್ತಾನೆ. ಮಂಗಳೂರು ನಗರ ಪೊಲೀಸರು ಚಾ.ಸಾ.1 ಸಲ್ಲಿಸಿದ ದೂರಿನ ಆಧಾರದ ಮೇಲೆ ತಮ್ಮ ಠಾಣಾ ಪ್ರಕರಣ ಸಂಖ್ಯೆ 108/2012ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಬಳಿಕ ತನಿಖಾಧಿಕಾರಿಯವರು ಘಟನಾ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿ ಆರೋಪಿಯು ಚಾ.ಸಾ.1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ಸ್ಥಳದಿಂದ ಅಮಾನತ್ತು ಪಡಿಸಿಕೊಂಡು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲು ಮಾಡಿರುತ್ತಾರೆ. ಚಾ.ಸಾ.10 ರವರು ತನಿಖೆಯನ್ನು ಮುಂದುವರಿಸಿ ಚಾ.ಸಾ.1ರವರ ಗಾಯದ ಪ್ರಮಾಣ ಪತ್ರವನ್ನು ಮಂಗಳೂರು ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಿಂದ ಪಡೆದುಕೊಂಡು ತನಿಖೆಯನ್ನು ಪೂರೈಸಿ ಈ ನ್ಯಾಯಾಲಯದ ಮುಂದೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

(3) ಈ ನ್ಯಾಯಾಲಯವು ಆರೋಪದ ಸಂಜ್ಞೆಯನ್ನು ತೆಗೆದುಕೊಂಡು ನ್ಯಾಯಾಲಯದ ಮುಂದೆ ಹಾಜರಾದ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿ ಆತನಿಗೆ ದೋಷಾರೋಪಣ ಪಟ್ಟಿಯ ನಕಲನ್ನು ಒದಗಿಸಲಾಗಿರುತ್ತದೆ. ಈ ನ್ಯಾಯಾಲಯವು ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ರಚಿಸಿ ಆತನಿಗೆ ಓದಿ ಹೇಳಿದಾಗ ಆರೋಪಿಯು ತಾನು ಯಾವುದೇ ತಪ್ಪು ಮಾಡಿಲ್ಲ ಮತ್ತು ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿರುತ್ತಾನೆ.

(4) ಆರೋಪಿಯ ವಿರುದ್ಧ ಆರೋಪವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಅಭಿಯೋಜನೆಯು ದೋಷಾರೋಪಣ ಪಟ್ಟಿಯಲ್ಲಿ ಹೆಸರಿಸಿರುವ ಹತ್ತು ಮಂದಿ ಸಾಕ್ಷಿದಾರರ ಪೈಕಿ ಆರು ಮಂದಿಯನ್ನು ಅ.ಸಾ.1 ರಿಂದ 6 ಎಂಬುದಾಗಿ ಸಾಕ್ಷಿ ವಿಚಾರಣೆಯನ್ನು ಮಾಡಿ ಅವರ ಮೂಲಕ ನಿಶಾನೆ ಪಿ.1 ರಿಂದ ಪಿ.7 ದಾಖಲೆಗಳನ್ನು ಮತ್ತು ಮು.ಮಾ.1 ಮತ್ತು 2 ವಸ್ತುಗಳನ್ನು ಗುರುತಿಸಿಕೊಂಡಿದೆ.

(5) ಆ ಬಳಿಕ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿ ಆತನ ವಿರುದ್ಧ ಇರುವ ಅಭಿಯೋಜನಾ ಸಾಕ್ಷಿದಾರರ ಸಾಕ್ಷ್ಯವನ್ನು ಆತನಿಗೆ ಓದಿ ಹೇಳಿದಾಗ ಆರೋಪಿಯು ಅವುಗಳೆಲ್ಲ ಸುಳ್ಳು ಎಂದು ಹೇಳಿ ತನ್ನ ಪರವಾಗಿ ಯಾವುದೇ ಹೇಳಿಕೆ ಮತ್ತು ಸಾಕ್ಷ್ಯ ಇಲ್ಲ ಎಂದು ಈ ನ್ಯಾಯಾಲಯದ ಮುಂದೆ ಹೇಳಿರುತ್ತಾನೆ.

(6) ನಾನು ಉಭಯ ಪಕ್ಷಗಾರರ ವಾದ ಆಲಿಸಿರುತ್ತೇನೆ.

(7) ಈಗ ನಾನು ಪರಿಗಣಿಸಬೇಕಾದ ಅಂಶಗಳೆಂದರೆ:

1. ದಿನಾಂಕ 05.04.2012ರಂದು ಬೆಳಗ್ಗೆ 10.30 ಗಂಟೆಗೆ ಮಂಗಳೂರು ನಗರ ಠಾಣಾ ವ್ಯಾಪ್ತಿಯ ಕುದ್ರೋಳಿ ದೇವಸ್ಥಾನದ ಬಳಿ ಆರೋಪಿಯು ಚಾ.ಸಾ.1 ರವರೊಂದಿಗೆ ಜಗಳ ತೆಗೆದು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿ ಭಾರತೀಯ ದಂಡ ಸಂಹಿತೆಯ ಕಲಂ 504ರ ಅಡಿಯಲ್ಲಿ ಆರೋಪವನ್ನು ಮಾಡಿರುತ್ತಾನೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸಿದೆಯೇ?

2. ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾ.ಸಾ.1 ರವರಿಗೆ ಒಂದು ದೊಣ್ಣೆಯಿಂದ ಆತನ ತಲೆಗೆ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡಿ ಭಾರತೀಯ ದಂಡ ಸಂಹಿತೆಯ ಕಲಂ 324ರ ಅಡಿಯಲ್ಲಿ ಆರೋಪವನ್ನು ಮಾಡಿರುತ್ತಾನೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸಿದೆಯೇ?

3. ಏನು ಆದೇಶ?

(8) ಈ ಕೆಳಗೆ ವಿವರಿಸಿದ ಕಾರಣಗಳಿಂದಾಗಿ ನಾನು ಈ ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ 1: ನಕಾರಾತ್ಮಕವಾಗಿ
ಅಂಶ 2: ನಕಾರಾತ್ಮಕವಾಗಿ
ಅಂಶ 3: ಅಂತಿಮ ಆದೇಶದ ಪ್ರಕಾರ